# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 128 (1151)
2. ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ಸಚಿವರು : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು
4. ಉತ್ತರಿಸುವ ದಿನಾಂಕ : 22.09.2022.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಾನವ ಹಕ್ಕುಗಳ ಆಯೋಗದ ರಚನೆಗೆ ಉದ್ಭವಿಸಿದ ಅಂಶಗಳೇನು; | ಮಾನವ ಹಕ್ಕುಗಳ ಆಯೋಗಗಳನ್ನು ಮಾನವ ಹಕ್ಕುಗಳ ಸಂರಕ್ಷಣೆಯನ್ನು ಉತ್ತಮಗೊಳಿಸಲು ನಾಗರೀಕರಿಗೆ ಸಮಾಜದಲ್ಲಿ ನ್ಯಾಯಯುತವಾಗಿ ಮಾನವೀಯತೆಯಿಂದ ಮತ್ತು ಘನತೆಯಿಂದ ಬಾಳಲು ಅವು ಸಹಕರಿಸುವುವು ಎಂಬ ಭರವಸೆಯಿಂದ / ಉದ್ದೇಶದಿಂದ ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ-1993 ರಡಿಯಲ್ಲಿ ರಚಿಸಲಾಗಿದೆ. ಇದು ಒಂದು ಕೇಂದ್ರದ ಶಾಸನವಾಗಿರುತ್ತದೆ. ಮಾನವ ಹಕ್ಕುಗಳ ದುರುಪಯೋಗಗಳಿಂದ ನೊಂದವರಿಗೆ ಕಾನೂನಿನ ನಿಯಮದಡಿಯಲ್ಲಿ ಪರಿಹಾರವನ್ನು ಒದಗಿಸುವುದು ಅವುಗಳ ಮುಖ್ಯ ಉದ್ದೇಶವಾಗಿದೆ. ಮಾನವ ಹಕ್ಕುಗಳ ಉಲ್ಲಂಘನೆಗಳು ಹತೋಟಿ ತಪ್ಪಿ ನಡೆಯದಂತೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಗೆ ಕಾರಣವಾದವರನ್ನು ತಮ್ಮ ಕೃತ್ಯಗಳಿಗೆ ಅಥವಾ ಕಾರ್ಯವೈಫಲ್ಯತೆಯ ಬಗ್ಗೆ ಜವಾಬ್ದಾರರಾಗುವಂತೆ ಆಯೋಗಗಳು ಕ್ರಮಕೈಗೊಳ್ಳುವುದು ಅವುಗಳ ಆದ್ಯ ಕರ್ತವ್ಯವಾಗಿದೆ (ಕಲಂ 12 ಮತ್ತು 18 ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993) ಸದರಿ ಅಧಿನಿಯಮದನ್ವಯ ಕರ್ನಾಟಕ ರಾಜ್ಯದಲ್ಲಿ ಅಧಿಸೂಚನೆ ಸಂಖ್ಯೆ: ಲಾ 20 ಎಲ್ಎಜಿ 2005, ದಿನಾಂಕ: 28.06.2005ರಲ್ಲಿ (ಪ್ರತಿ ಲಗತ್ತಿಸಿದೆ) ಬೆಂಗಳೂರು ಕೇಂದ್ರಸ್ಥಾನವನ್ನಾಗಿಸಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಅಸ್ತಿತ್ವಕ್ಕೆ ಬಂದಿದೆ. |
| (ಆ) | ಅಪರಾಧಗಳನ್ನು ಎಸಗಿರುವ ಆರೋಪಿಗಳಿಂದ ಮಾಹಿತಿಯನ್ನು ಪಡೆಯಲು ಅನುಸರಿಸುವ ವಿಧಿ-ವಿಧಾನಗಳೇನು; (ವಿವರ ಒದಗಿಸುವುದು) | ದೂರಿನ ರೀತಿಯ ಆಧಾರದ ಮೇಲೆ ಅದನ್ನು ಸಂಬಂಧಪಟ್ಟ ಸರ್ಕಾರಿ ಇಲಾಖೆಗೆ ವರದಿಗಾಗಿ ಕಳುಹಿಸಬಹುದು ಅಥವಾ ಗುಪ್ತದಳ ಇಲಾಖೆ ಅಥವಾ ಸ್ಥಳೀಯ ಪೊಲೀಸರಿಗೆ ವಿಚಾರಣೆಗಾಗಿ ಕಳುಹಿಸಬಹದು. ವಿಚಾರಣಾ ವರದಿಯು ಆಯೋಗಕ್ಕೆ ತೃಪ್ತಿಯಾಗದಿದ್ದರೆ ಅಥವಾ ಪ್ರಕರಣವು ಸೂಕ್ಷ್ಮವಾಗಿದ್ದು ಅಥವಾ ತೀವ್ರರೀತಿಯ ಮಾನವ ಹಕ್ಕುಗಳ ಉಲ್ಲಂಘನೆಯಾಗಿದ್ದು ಹಿರಿಯ ಅಧಿಕಾರಿಗಳು ಅಥವಾ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳು ಭಾಗಿಯಾಗಿದ್ದಲ್ಲಿ, ಆಯೋಗವು ತನ್ನ ತನಿಖಾ ತಂಡಕ್ಕೆ ವಿಚಾರಣೆ ನಡೆಸುವಂತೆ ಸೂಚಿಸಲಾಗುತ್ತದೆ. |

| | | |
|---|---|---|
| | | ಒಮ್ಮೆ ತನಿಖಾ ವರದಿಯನ್ನು ಸ್ವೀಕರಿಸಿದರೆ, ಆಯೋಗವು ದೂರುದಾರರು ಅಥವಾ ಯಾರ ವಿರುದ್ಧ ದೂರನ್ನು ನೀಡಲಾಗಿದೆಯೋ ಅವರಿಂದ ಅಭಿಪ್ರಾಯ ಕೇಳಲಾಗುತ್ತದೆ.<br><br>ಎಲ್ಲಾ ವಾಸ್ತವಾಂಶಗಳು ಮತ್ತು ಸಂದರ್ಭಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಅಧ್ಯಕ್ಷರು ಅಥವಾ ಸದಸ್ಯರು ಒಂದು ಪ್ರಕರಣವನ್ನು ನಿರ್ಧರಿಸುವರು. ಅವರು ಅದನ್ನು ವಜಾಗೊಳಿಸಬಹುದು. ಅಂದರೆ ಯಾವುದೇ ಮಾನವ ಹಕ್ಕುಗಳ ಉಲ್ಲಂಘನೆಯಾಗಿಲ್ಲವೆಂದು ನಿರ್ಧರಿಸಬಹುದು. ಪರ್ಯಾಯ - ವಾಗಿ ಒಂದು ಉಲ್ಲಂಘನೆಯಾಗಿದೆ ಎಂದು ಅವರು ತೀರ್ಮಾನಿಸಿಕೊಟ್ಟರೆ, ಆ ಪ್ರಕರಣದಲ್ಲಿ ಯಾವ ರೀತಿಯ ಕ್ರಮ ತೆಗೆದುಕೊಳ್ಳಬಹುದು ಎಂಬುದರ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತದೆ. ಕೆಲವೊಮ್ಮೆ ಸಂಬಂಧಪಟ್ಟ ಇಲಾಖೆಗಳೇ ಸೂಕ್ತ ಕ್ರಮ ಕೈಗೊಳ್ಳುವುದರಿಂದ ಶಿಫಾರಸ್ಸು ಮಾಡುವ ಅಗತ್ಯವಿರುವುದಿಲ್ಲ (ಕಲಂ 12,13,14,16, 17 ಮತ್ತು 18 ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993) |
| (ಇ) | ಕಾರಾಗೃಹ ಶಿಕ್ಷೆಗೆ ಒಳಗಾಗುವ ವಿವಿಧ ಪ್ರಕರಣಗಳಲ್ಲಿನ ಆರೋಪಿಗಳಿಗೆ ಒದಗಿಸುವ ಸೌಲಭ್ಯಗಳೇನು: ಇದಕ್ಕೆ ಗೊತ್ತುಪಡಿಸಿರುವ ಮಾನದಂಡಗಳೇನು; | ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆಯು ಅಪರಾಧ ನ್ಯಾಯಿಕ ವ್ಯವಸ್ಥೆಯ ಒಂದು ಅವಿಭಾಜ್ಯ ಅಂಗವಾಗಿದ್ದು, ಶಿಕ್ಷಾ ಬಂಧಿಗಳನ್ನು ಮನಃ ಪರಿವರ್ತಿಸಿ, ಸಮಾಜದ ಮುಖ್ಯ ವಾಹಿನಿಗೆ ಉತ್ತಮ ನಾಗರಿಕರನ್ನಾಗಿ ಸೇರ್ಪಡೆಗೊಳಿಸುವುದು ಇಲಾಖೆಯ ಪ್ರಮುಖ ಉದ್ದೇಶವಾಗಿರುತ್ತದೆ.<br><br>1) ಕರ್ನಾಟಕ ಕಾರಾಗೃಹಗಳ ನಿಯಮಗಳು, 1974, ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವೆ ಕೈಪಿಡಿ–2021 ಹಾಗೂ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳು/ಮಾರ್ಗಸೂಚಿಗಳು ಪ್ರಕಾರ ಶಿಕ್ಷಾ ಬಂಧಿಗಳಿಗೆ ಸಂದರ್ಶನ/ಉದ್ಯೋಗ ತರಬೇತಿ/ ಕೆಲಸ/ಕೂಲಿ ಹಣ/ಪೆರೋಲ್ ರಜೆ/ಮಾಫಿ/ ಅವಧಿ ಪೂರ್ವ ಬಿಡುಗಡೆ/ ಮುಂತಾದ ಸೌಲಭ್ಯಗಳನ್ನು ನಿಯಮಾನುಸಾರ ಒದಗಿಸಲಾಗುತ್ತಿದೆ.<br><br>2) ಗೌ॥ ಸರ್ವೋಚ್ಚ ನ್ಯಾಯಾಲಯ/ಉಚ್ಚ ನ್ಯಾಯಾಲಯ ಮತ್ತು ಗೌ॥ ರಾಷ್ಟ್ರೀಯ/ರಾಜ್ಯ ಮಾನವ ಹಕ್ಕುಗಳ ಆಯೋಗವು ನೀಡುವ ನಿರ್ದೇಶನಗಳ ಪ್ರಕಾರ ಶಿಕ್ಷಾ ಬಂಧಿಗಳಿಗೆ ಅವಶ್ಯಕ ಸೌಲಭ್ಯಗಳನ್ನು ನಿಯಮಾನುಸಾರ ಒದಗಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಈ) | ಹಾಗಿದ್ದಲ್ಲಿ, ಎಲ್ಲಾ ರೀತಿಯ ಆರೋಪಿಗಳನ್ನು ಒಂದೇ ತೆರವಾಗಿ ಪರಿಗಣಿಸುತ್ತಿರುವುದು ಮಾನವ ಹಕ್ಕುಗಳ ಉಲ್ಲೇಂಘನೆಯಲ್ಲವೇ: ಇವುಗಳನ್ನು ಸರಿಪಡಿಸಲು ಯಾವ ರೀತಿಯ ಕಾನೂನುಗಳನ್ನು ರಚಿಸಬೇಕಾಗಿದೆ; ಈ ಬಗ್ಗೆ ಸರ್ಕಾರದ ಕ್ರಮಗಳೇನು? | ಎಲ್ಲಾ ರೀತಿಯ ಆರೋಪಗಳನ್ನು ಒಂದೇ ತರಹ ಪರಿಗಣಿಸುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗುವುದಿಲ್ಲ. ಏಕೆಂದರೆ, ನ್ಯಾಯಾಲಯದಲ್ಲಿ ಆರೋಪಿಗಳ ವಿಚಾರಣೆಗಾಗಿ ಆರೋಪಿತರು ಅಪರಾದ ಮಾಡಿದ್ದಾರೆಂದು ನ್ಯಾಯಾಲಯವು ತೀರ್ಮಾನಿಸಿ, ಶಿಕ್ಷೆ ವಿಧಿಸುವವರೆಗೆ ಅವರು ಕೇವಲ ಆರೋಪಿತರು ಅಥವಾ ಆಪಾದಿತರಾಗಿರುತ್ತಾರೆ.<br><br>ಕರ್ನಾಟಕ ಕಾರಾಗೃಹ ಅಧಿನಿಯಮ 1963, ಕರ್ನಾಟಕ ಬಂಧಿಗಳ ಅಧಿನಿಯಮ 1963, ಕರ್ನಾಟಕ ಕಾರಾಗೃಹಗಳ ನಿಯಮಗಳು 1974, ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವೆ ಕೈಪಿಡಿ–2021ರ ಪ್ರಕಾರ ಅಗತ್ಯ ಕ್ರಮವಹಿಸಲಾಗುತ್ತಿದೆ.<br><br>ಗೌ॥ ಸರ್ವೋಚ್ಚ ನ್ಯಾಯಾಲಯ / ಉಚ್ಚ ನ್ಯಾಯಾಲಯ, ಗೌ॥ ರಾಷ್ಟ್ರೀಯ / ರಾಜ್ಯ ಮಾನವ ಹಕ್ಕುಗಳ ಆಯೋಗವು ಕಾಲ ಕಾಲಕ್ಕೆ ನೀಡುವ ನಿರ್ದೇಶನಗಳ ಪ್ರಕಾರ ಅಗತ್ಯ ಕ್ರಮವಹಿಸಲಾಗುತ್ತಿದೆ.<br><br>ಕಾಲ ಕಾಲಕ್ಕೆ ಅನುಗುಣವಾಗಿ ಸರ್ಕಾರದ ಆದೇಶಗಳು ಮತ್ತು ಮಾರ್ಗಸೂಚಿಗಳ ಪ್ರಕಾರ ಅಗತ್ಯ ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ:ಲಾ-ಹೆಚ್‌ಆರ್‌ಎಮ್/158/2022**

(ಜೆ.ಸಿ. ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ
ಸಣ್ಣ ನೀರಾವರಿ ಸಚಿವರು

No: LAW 20 LAG 2005

Karnataka Government Secretariat
'Vidhana Soudha,
Bangalore, dated: 28th June, 2005.

# NOTIFICATION

In exercise of the powers conferred under Section 21 of the Protection of Human Rights of Act, 1993 [Act No: 10 of 1994], Government hereby constitutes a body to be known as the "Karnataka Human Rights Commission", with Headquarters at Bangalore, to exercise the powers conferred upon, and to perform the functions assigned to, a State Commission under Chapter – V of the said Act.

By order and in the name of the
Governor of Karnataka,

(D'Souza Robinson)
Secretary to Government,
Law Department.

To

The Compiler, Karnataka Gazette, Bangalore, for publication in the next issue of the Gazette, with a request to supply 200 copies of the Notification to Government.

Copy to:

(1) The Advocate General of Karnataka, Bangalore.
(2) The Accountant General in Karnataka I/II, Bangalore.
(3) The Secretary-General, National Human Rights Commission, Sardar Patel Bhavan, Sansad Marg, New Delhi-11 001. New Delhi.